**ಸಿ.ಸಿ. ನಂಃ 1161/2022 ಪಿ.ಡಬ್ಲ್ಯೂ- 1**

**ದಿನಾಂಕಃ 25.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಡಿ.ಎಲ್.ಎಂ. ವಕೀಲರಿಂದಃ</u>

ನೀವು ಏನು ಓದಿರುತ್ತೀರಾ ಎಂದರೆ ನಂತರ 3 ನೇ ತರಗತಿ ಎನ್ನುತ್ತಾರೆ. ಇಂಗ್ಲಿಷ್ ಓದಲು ಮತ್ತು ಬರೆಯಲು ಬರುತ್ತದಾ ಎಂದರೆ ಸಹಿ ಮಾಡುತ್ತೆನೆ ಎನ್ನುತ್ತಾರೆ. ಯಾವ ಕೆಲಸ ಮಾಡುತ್ತೀರಾ ಎಂದರೆ ವಾಹನ ಖರೀದಿ ಮತ್ತು ಮಾರಾಟ ಮಾಡುತ್ತೆನೆ ಎನ್ನುತ್ತಾರೆ. ಎಷ್ಟು ವರ್ಷದಿಂದ ಕೆಲಸ ಮಾಡುತ್ತೀರಾ ಎಂದರೆ 25 ರಿಂದ 30 ವರ್ಷದಿಂದ ಮಾಡುತ್ತೆನೆ ಎನ್ನುತ್ತಾರೆ. ಅದಕ್ಕಾಗಿ ಕಚೇರಿ ಇರುತ್ತದಾ ಎಂದರೆ ಮನೆಯಲ್ಲೆ ಮಾಡುತ್ತೆನೆ ಎನ್ನುತ್ತಾರೆ. ಈ ಕೆಲಸದಿದಂದ ಎಷ್ಟು ಆದಾಯ ಬರುತ್ತದೆ ಎಂದರೆ 30-40 ಸಾವಿರ ಎನ್ನುತ್ತಾರೇ. ಪ್ರಸ್ತುತ ಪ್ರಕರಣ ಸಲ್ಲಿಸಲು ವಕೀಲರಿಗೆ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೆನೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ ಆರೋಪಿ ಹೇಗೆ ಪರಿಚಯ ಎಂದರೆ ಆರೋಪಿ ಚಿಂತಾಮಣಿಗೆ ಬರುತ್ತಿದ್ದರು ಆಗ ಪರಿಚಯ ಎನ್ನುತ್ತಾರೆ. ಆರೋಪಿ ನಿಮ್ಮ ಬಳಿ ಯಾವ ದಿನಾಂಕದಂದು ಬಂದಿರುತ್ತಾರೆ ಎಂದರೆ ಸಾಕ್ಷಿ ಯಾವ ದಿನಾಂಕ ಎಂದು ನೆನಪಿಲ್ಲ ಆದರೆ ಮೇ 1 ರಂದು ಕೇಳಿರುತ್ತಾರೆ ನಾನು ದಿನಾಂಕ 10.05.2022 ರಂದು ಹಣವನ್ನು ಕೊಟ್ಟಿರುತ್ತೆನೆ ಎನ್ನುತ್ತಾರೆ. ಆಗ ಯಾರು ಯಾರು ಬಂದಿರುತ್ತಾರೆ ಎಂದರೆ ಆರೋಪಿ ಒಬ್ಬರೇ ಬಂದಿರುತ್ತಾರೆ ಎನ್ನುತ್ತಾರೆ. ಆರೋಪಿ ಕುಟುಬಂದವರು ಪರಿಚಯ ಇರುತ್ತಾರಾ ಎಂದರೆ ಇಲ್ಲ ಎನ್ನುತ್ತಾರೆ. ಆರೋಪಿ ಒಬ್ಬರೇ ಪರಿಚಯ ಎನ್ನುತ್ತಾರೆ. ಆರೋಪಿ

ಕುಟುಂಬದವರ ಜೊತೆ ಯಾವ ವ್ಯವಹಾರ ಇಲ್ಲ ಎಂದರೆ ಇಲ್ಲ ಎನ್ನುತ್ತಾರೆ. ನಿಪಿ 1(ಎ) ಮತ್ತು ಆರೋಪಿಯ ವಕಾಲತ್ತು ಅಲ್ಲಿರುವ ಸಹಿ ಬೇರೆ ಬೇರೆ ಎಂದರೆ ಸಾಕ್ಷಿ ನಿಪಿ 1 ಕ್ಕೆ ಅವರೇ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಆರೋಪಿ ತಂದೆಯ ಹೆಸರು ಗೊತ್ತ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ವಾಸವಿರುವ ಅಡ್ರೆಸ್ ಗೊತ್ತಾ ಎಂದರೆ ಗೊತ್ತು ಎನ್ನುತ್ತಾರೆ. ಆರೋಪಿಯ ಹುಣಸೇನಹಳ್ಳಿ ಸ್ಟೇಷನ್ ಪಕ್ಕದಲ್ಲಿ ಇರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ಆರೋಪಿಯ ಆಧಾರ ಕಾರ್ಡ್ ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಂತು. ಸದರಿ ಆಧಾರ್ ಕಾರ್ಡ್ ನಲ್ಲಿ ಪ್ರವೀಣ ಕುಮಾರ ಎಸ್ ಕೆ ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ನಿಪಿ 1 ರಲ್ಲಿ ಪ್ರವೀಣ ಕುಮಾರ ಪಿ ಎಂದು ಇರುತ್ತದೆ ಎಂದರೆ ಮೊದಲೆ ಸಹಿ ಮಾಡಿ ಚೆಕ್ ಕೊಟ್ಟಿದ್ದರು ಅದನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಪಿ 1 ರಲ್ಲಿ ಇರುವ ಪ್ರವೀಣ ಕುಮಾರ ಪಿ ಬೇರೆ ಮತ್ತು ಪ್ರವೀಣ ಕುಮಾರ ಎಸ್ ಕೆ ಬೇರೆ ಎಂದರೆ ನನಗೆ ಗೊತ್ತಿಲ್ಲ ಅವರು ಮನೆಯಲ್ಲಿ ಚೆಕ್ಕನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಪಿ 1 ಮತ್ತು 2 ಎರಡನ್ನು ನೋಡಿ ತಿಳಿದುಕೊಂಡಿರುತ್ತೀರಾ ಎಸಂದರೆ ನನ್ನ ಖಾತೆ ಕೆನರಾ ಬ್ಯಾಂಕ್ ನಲ್ಲಿ ಇರುತ್ತದೆ ಅಲ್ಲಿ ಹಾಕಿರುತೆನೆ ಎನ್ನುತ್ತಾರೆ. ಪ್ರವೀಣ ಕುಮಾರ ಎಸ್ ಕೆ ರವರದ್ದು ಕೋಟಕ್ ಮಹಿಂದ್ರಾ ಬ್ಯಾಂಕ್ ನಲ್ಲಿ ಖಾತೆ ಇಲ್ಲ ಎಂದರೆ ಸರಿಯಲ್ಲ. ಪ್ರವೀಣ ಕುಮಾರು ಎಸ್ ಕೆ ನಿಮ್ಮ ಹತ್ತಿರ ಸಾಲ ಕೇಳಲು ಬಂದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಮೊದಲ ಬಾರಿ ನೋಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ 3 ಆರೋಪಿತನಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಬಳಿ ಯಾವುದೇ ವ್ಯವಹಾರ ಮಾಡಿಲ್ಲ ಅದ್ದರಿಂದ ನಿಪಿ 3 ಹಾಗಾಗಿ ಅವರಿಗೆ ತಲುಪಿಲ್ಲ ಎಂದರೆ ಸರಿಯಿಎಲ್ಲ. ನೀವು ಆರೋಪಿಗೆ ಸಾಲ ಕೊಟ್ಟಿದ್ದ ಬಗ್ಗೆ ಯಾವುದೇ

ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರವೀಣ ಕುಮಾರ ಎಸ್ ಕೆ ಯಾರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ಮುಂದೆ ಇರುವ ಪ್ರವೀಣ ಕುಮಾರ ಎಸ್ ಕೆ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.